# ಹಿಪ್ಪುನೇರಳೆಯಲ್ಲಿ ಮೇ-ಜೂನ್ ದುಂಬಿಗಳ ನಿರ್ವಹಣೆ

ಹಿಪ್ಪುನೇರಳೆ ಗಿಡಗಳಿಗೆ ಹಾನಿ ಮಾಡುವ ಹಲವಾರು ಪ್ರಮುಖ ಕೀಟಗಳಲ್ಲಿ ಮೇ - ಜೂನ್ ದುಂಬಿಗಳು ಸಹ ಪ್ರಮುಖವಾಗಿ ಕಂಡುಬರುತ್ತಿದ್ದು, ಇತ್ತೀಚಿನ ವರ್ಷಗಳಲ್ಲಿ ಪ್ರಮುಖವಾಗಿ ಕೋಲಾರ, ಮಂಡ್ಯ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಹಿಪ್ಪುನೇರಳೆ ತೋಟಗಳಿಗೆ ಹೆಚ್ಚಾಗಿ ಹಾನಿ ಮಾಡುತ್ತಿದ್ದು ರೇಷ್ಮೆ ಬೆಳೆಗಾರರಿಗೆ ತಲೆನೋವಾಗಿ ಪರಿಣಮಿಸಿದೆ.



ಪ್ರೌಢಾವಸ್ಥೆಯ ದುಂಬಿಗಳು ರಾತ್ರಿ ಸಮಯದಲ್ಲಿ ಹಿಪ್ಪುನೇರಳೆ ತೋಟಗಳಿಗೆ ಗುಂಪಾಗಿ ದಾಳಿ ಮಾಡಿ ಗಿಡದ ಎಳೆಯ ಭಾಗಗಳನ್ನು ತಿನ್ನುವುದಲ್ಲದೆ ಗೆಣ್ಣು / ಕಣ್ಣುನ್ನು ಹಾನಿಗೊಳಿಸುತ್ತವೆ. ಸುಮಾರು 9 ರಿಂದ 10 ದುಂಬಿಗಳು ಒಂದೇ ಹಿಪ್ಪುನೇರಳೆ ಎಲೆಯಲ್ಲಿರುವುದನ್ನು ಗಮನಿಸಬಹುದು. ಗುಂಪು ಗುಂಪಾಗಿ ದಾಳಿ ಮಾಡುವ ದುಂಬಿಗಳು ಒಂದೇ ದಿನದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಾನಿಯನ್ನು ಮಾಡುತವೆ. ಸೊಪ್ಪಿನ ಹಾನಿಯ ಪ್ರಮಾಣ ಶೇ.20ರಷ್ಟು ಎಂದು ಅಂದಾಜಿಸಲಾಗಿದೆ.

ಮೇ - ಜೂನ್ ದುಂಬಿಗಳನ್ನು ಕಾಕ್ ಚಾಫ್ಲರ್ ದುಂಬಿ ಎಂದೂ ಕರೆಯಲಾಗುತ್ತಿದ್ದು, ವೈಜ್ಞಾನಿಕವಾಗಿ ಹೋಲೋಟ್ರೈಕಿಯ ಸೆರ್ರಟ ಎಂದು ಕರೆಯುತ್ತಾರೆ. ಮುಂಗಾರು ಮಳೆ ಬಿದ್ದ ಕೂಡಲೇ ರಾತ್ರಿ ಹೊತ್ತಿನಲ್ಲಿ ಮಣ್ಣಿನಿಂದ ಹೊರ ಬಂದು ಹಿಪ್ಪುನೇರಳೆ ಎಲೆಗಳನ್ನು ತಿನ್ನಲಾರಂಭಿಸುತ್ತವೆ. ಈ ದುಂಬಿಗಳಿಗೆ ಇತರೆ ಆಸರೆ ಸಸ್ಯಗಳೆಂದರೆ ಬೇವು, ಕಾಡು ಪಪ್ಪಾಯ, ಕಕ್ಕೆ, ಬೆಂಡೆ, ಅಲಸಂದೆ, ಎಲಚಿ ಗಿಡ, ಗುಲಾಬಿ ಹಾಗೂ ಹುಲ್ಲು.



**ಮೇ-ಜೂನ್ ದುಂಬಿಯ ಜೀವನ ಚಕ್ರ**

**ಮೊಟ್ಟೆ:** ಪ್ರತಿ ಹೆಣ್ಣು ದುಂಬಿಯ ಸುಮಾರು 800-1000 ಮೊಟ್ಟೆಗಳನ್ನು ಒದ್ದೆ ಮಣ್ಣಿನಲ್ಲಿ 5 ರಿಂದ 6 ಸೆಂ.ಮೀ. ಆಳದಲ್ಲಿ ಇಡುತ್ತವೆ. ಮೊಟ್ಟೆಗಳು ಬಿಳಿ ಬಣ್ಣದಲ್ಲಿದ್ದು ಅರ್ಧ ವೃತ್ತಾಕಾರದಲ್ಲಿರುತವೆ. ಸುಮಾರು 12 ರಿಂದ 14 ದಿನಗಳಲ್ಲಿ ಮೊಟ್ಟೆಗಳು ಒಡೆದು ಮರಿ ಹುಳುಗಳು ಹೊರ ಬರುತ್ತವೆ.

**ಮರಿಹುಳು ಹಂತ:** ಗೊಣ್ಣೆಹುಳುಗಳೆಂದು ಕರೆಯಲ್ಪಡುವ ಈ ಮರಿಹುಳುಗಳು ಮೂರು ಹಂತಗಳಲ್ಲಿ ಬೆಳೆಯುತ್ತವೆ. ಇವು ಕಬ್ಬು, ತೆಂಗು, ನೆಲಗಡಲೆ, ಹುಲ್ಲು ಇತ್ಯಾದಿಗಳ ಬೇರುಗಳನ್ನು ತಿನ್ನುತ್ತವೆ.

**ಮೊದಲನೆ ಹಂತ:** 30-40 ದಿನಗಳು,

**ಎರಡನೆ ಹಂತ:** 150-160 ದಿನಗಳು,

**ಮೂರನೆ ಹಂತ:** ೧೮೦-೧೯೦ ದಿನಗಳು

ಮರಿಹುಳುಗಳು ತಿಳಿ ಹಳದಿ ಬಣ್ಣ ಹೊಂದಿದ್ದು, ಕಂದು ಅಥವಾ ಕಪ್ಪು ಬಣ್ಣದ ತಲೆಯನ್ನು ಹೊಂದಿರುತ್ತವೆ. ಇವು ಕಬ್ಬು, ತೆಂಗು ಇತರೆ ಬೆಳೆಗಳ ಬೇರನ್ನು ತಿಂದು ಬದುಕುತ್ತವೆ.

**ಕೋಶಾವಸ್ಥೆ:** ಇವು ಮಣ್ಣಿನಲ್ಲಿ ಸುಮಾರು 90-110 ದಿನಗಳ ಕಾಲ ಕೋಶಾವಸ್ಥೆಯಲ್ಲಿರುತ್ತವೆ.

**ಪ್ರೌಢಾವಸ್ಥೆ:** ಮುಂಗಾರು ಮಳೆ ಬಿದ್ದ ಕೂಡಲೇ ದುಂಬಿಗಳಾಗಿ ಮಣ್ಣಿನಿಂದ ಹೊರಬರುವ ಇವು ನಿಶಾಚರಿಗಳಾಗಿ ಸುಮಾರು 10 ರಿಂದ 12 ದಿನಗಳ ಕಾಲ ಹಿಪ್ಪುನೇರಳೆ ಹಾಗೂ ಇತರೆ ಆಸರೆ ಸಸ್ಯಗಳಾದ ಹಲಸು, ಬೇವು, ಅಕೆಸಿಯಾ ಎಲೆಗಳನ್ನು ಸಂಪೂರ್ಣವಾಗಿ ತಿಂದು ಹಾಕುತ್ತವೆ.

# ಹಿಪ್ಪುನೇರಳೆ

ಮೇ–ಜೂನ್ ದುಂಬಿಗಳು ತನ್ನ ಜೀವನ ಚಕ್ರವನ್ನು ಒಂದು ವರ್ಷಕ್ಕೆ ಪೂರ್ಣಗೊಳಿಸುತ್ತದೆ.



**ನಿರ್ವಹಣಾ ಕ್ರಮಗಳು:**


1.ರೇಷ್ಮೆ ಬೆಳೆಗಾರರು ರಾತ್ರಿಯ ಸಮಯದಲ್ಲಿ ಹಿಪ್ಪುನೇರಳೆ ತೋಟಕ್ಕೆ ಭೇಟಿ ನೀಡಿ ಹೆಚ್ಚು ಬೆಳಕು ಚೆಲ್ಲುವ ಟಾರ್ಚ್‌ಗಳನ್ನು ಬಳಸಿ ಸೊಪ್ಪು ತಿನ್ನುತ್ತಿರುವ ಪ್ರೌಢ ದುಂಬಿಗಳನ್ನು ಗೋಣಿ ಚೀಲದಲ್ಲಿ ಸಂಗ್ರಹಿಸಿ ಸೀಮೆಎಣ್ಣೆ ಮಿಶ್ರಿತ ನೀರಿನ ದ್ರಾವಣದಲ್ಲಿ (1:50) ಹಾಕಿ ನಾಶಪಡಿಸುವುದು ಅಥವಾ ಸುಡುವುದು.

2. ಬೆಳಕಿನ ಟ್ರ್ಯಾಪ್‌ಗಳನ್ನು ಇಟ್ಟು ಅದರೆಡೆ ಆಕರ್ಷಿತಗೊಳ್ಳುವ ಪ್ರೌಢ ದುಂಬಿಗಳನ್ನು ಸೀಮೆಎಣ್ಣೆಯ ದ್ರಾವಣದಲ್ಲಿ (1:50) ಬೀಳುವಂತೆ ಮಾಡಿ ನಾಶಪಡಿಸುವುದು.

3. ಸಂಜೆ ಹೊತ್ತಿನಲ್ಲಿ ತಾಜಾ ಬೇವಿನ ಮರದ ರೆಂಬೆಗಳನ್ನು ಹಿಪ್ಪುನೇರಳೆ ಗಿಡಗಳ ಮೇಲೆ ಹರಡುವುದರಿಂದ ಬೇವಿನ ರೆಂಬೆಗಳೆಡೆಗೆ ಆಕರ್ಷಿತಗೊಂಡ ದುಂಬಿಗಳನ್ನು ಗೋಣಿ ಚೀಲಗಳಲ್ಲಿ ಸಂಗ್ರಹಿಸಿ ನಾಶಪಡಿಸುವುದು.

4. ಆಳವಾಗಿ ಉಳುಮೆ ಮಾಡುವುದರಿಂದ ಈ ದುಂಬಿಗಳ ಹುಳುವಿನ ಹಂತವನ್ನು ನೇರ ಸೂರ್ಯ ಕಿರಣಗಳಿಂದ ನಾಶಪಡಿಸಬಹುದು. ಹಾಗೂ ಕೀಟಗಳನ್ನು ಪಕ್ಷಿಗಳಿಂದ ಸಹ ಆಯ್ದು ತಿನ್ನಲ್ಪಡುತ್ತವೆ.

5. ಹಿಪ್ಪುನೇರಳೆ ತೋಟ ಕಟಾವಾದ 20 ದಿನಗಳ ಒಳಗೆ ಬೇವಿನ ಮರದ ರೆಂಬೆಗಳಿಗೆ ಶೇ.0.25ರ ಕ್ಲೋರೋಪೈರಿಪಾಸ್ (ಪ್ರತಿ ಲೀಟರ್ ನೀರಿಗೆ 2.5 ಎಂ.ಎಲ್) ಸಿಂಪಡಿಸಿ ಹಿಪ್ಪುನೇರಳೆ ಗಿಡಗಳ ನಡುವೆ ಇಡುವುದರಿಂದ ಬೇವಿನ ಸೊಪ್ಪನ್ನು ತಿಂದಂತಹ ದುಂಬಿಗಳು ಸಾಯುತ್ತವೆ.






6. ಹಿಪ್ಪುನೇರಳೆ ಕಟಾವಾಗಿ 20 ದಿನಗಳ ಒಳಗಾಗಿದ್ದಲ್ಲಿ ದುಂಬಿಗಳು ರಾತ್ರಿ ಹೊತ್ತಿನಲ್ಲಿ ಎಲೆಗಳ ಮೇಲೆ ಕುಳಿತಿದ್ದಂತೆಯೇ ಶೇ. 0.15 ಪ್ರಮಾಣದ ಡಿ.ಡಿ.ವಿ.ಪಿ ಕೀಟನಾಶಕವನ್ನು (2 ಮಿ.ಲೀ. ಕೀಟನಾಶಕವನ್ನು 1 ಲೀ. ನೀರಿನಲ್ಲಿ ಬೆರೆಸಿ) ಸಿಂಪಡಿಸಬಹುದು.


– ಡಾ. ಶಶಿಧರ್, ಕೆ.ಆರ್.,
ಡಾ. ನಾಗರಾಜ ಕೆ.ಎಸ್.
ಡಾ.ನೂರುಲ್ಲಾ ಹಾವೇರಿ
ಐಸಿಎಆರ್–ಕೃಷಿ ವಿಜ್ಞಾನ ಕೇಂದ್ರ